ಮುಖಾರವಿಂದ ಅಭಿವ್ಯಕ್ತಿಸುತ್ತಲೇ ಇತ್ತು. ಬೆಲ್ ಹೊಡೆದು ಕಾಫಿ ತರಿಸಿದಳು. ರೂಮಿನ ತುಂಬಾ ದುಬಾರಿ ಸುವಾಸಿತ ಸೆಂಟ್ ಹರಿದಾಡುತ್ತಲೇ ಇತ್ತು. ಕಾಫಿ ಕುಡಿದ ಮೇಲೆಯೂ ಇವನು ಮಾತಾಡದೆ ಹಾಗೆಯೇ ಕುಳಿತ. 'ಮಾತಾಡೋ ದೇವದತ್ತ ಯಾಕೆ ಮೌನವಾಗಿದ್ದೀಯಾ? ಪ್ಲೀಸ್' ಎಂದರೂ ಇವನು ಮಾತಾಡಲಿಲ್ಲ. ಹತ್ತು ವರ್ಷದ ಮೌನ ರೆಕ್ಕೆ ಕಳೆದುಕೊಂಡು ಬಿದ್ದಿತ್ತು. ಇಲ್ಲಿಗೆ ತಾನು ಬಂದಿದ್ದು ಮಾತಾಡಿ ಅವಳನ್ನು ಸಂತೋಷಿಸಲು ಅಲ್ಲ ಎಂದು ಗಂಭೀರವಾಗಿ ಕುಳಿತ. ಅವಳು ಫೇಸ್‌ಬುಕ್‌ನಲ್ಲಿ ಅವನ ಫೋನ್ ನಂಬರ್ ಸಿಕ್ಕ ವಿಷಯ ಹೇಳಿದಳು. ತನ್ನ ಮಕ್ಕಳಾದ ಶ್ರೇಯಾ-ಶರತ್ ಬಗ್ಗೆ ಹೇಳಿದಳು. ಇವನು ಮಾತಾಡಲೇ ಇಲ್ಲ; ಮೌನವಾಗೇ ಕುಳಿತಿದ್ದ. ಇವನಿಗೆ ಎಲ್ಲಿಂದ ಮಾತಾಡಬೇಕು, ಹೇಗೆ ಮಾತಾಡಬೇಕು ಎಂದು ತಿಳಿಯಲಿಲ್ಲ. ಅವಳ ಜೊತೆ ಕಳೆದ ಗಳಿಗೆಗಳೆಲ್ಲ ಹರಿವ ನದಿಯ ಮೈಯ್ಯೆಲ್ಲ ಕಾಲಿನಂತೆ ಎಲ್ಲಾ ಕಡೆ ಹೃನ್ಮನಗಳನ್ನು ಆವರಿಸಿಕೊಂಡಿದ್ದವು. ಅವಳು ಬರುತ್ತೇನೆಂದು ಫೋನ್ ಮಾಡಿದಾಗ ಸತ್ತು ಹೋದ ನೆನಪುಗಳು ಮತ್ತೆ ಫೀನಿಕ್ಸ್ ಪಕ್ಷಿಯಂತೆ ಕಣ್ಣೆದುರಲ್ಲೇ ಕುಣಿದಾಡಿದಂತೆ ಭಾಸವಾಗಿತ್ತು. ಇವನ ಮೌನಕ್ಕೆ ಪ್ರತಿಕಾರವೆಂಬಂತೆ, 'ದತ್ತು, ಹತ್ತು ನಿಮಿಷ... ಮೂರು ಮೇಲ್ ಕಳಿಸಬೇಕು. ನಿಲ್ಲು' ಎಂದು ತನ್ನ ಲ್ಯಾಪ್‌ಟಾಪ್ ತೆಗೆದು ಕುಂತಳು. ಇದು ಆಕೆಯ ವೈಭವ ತೋರಿಸುವ ಒಂದು ಸಾಧನವೆಂದು ತಿಳಿದು ತನ್ನ ಗತದ ಇತಿಹಾಸವನ್ನು ಮೆಲುಕು ಹಾಕಿದ.

ಎಷ್ಟು ಮಾತುಗಳು ಹಾಗೆ ಉಳಿದವು ಎಣಿಸಲಾರದ ನಕ್ಷತ್ರಗಳಂತೆ, ಮೊದಲು ಪ್ರೀತಿ ವ್ಯಕ್ತಪಡಿಸಲು ಪಾಗುಂಟಿ ಎಂಬ ಆ ಯುನಿವರ್ಸಿಟಿಯ ಹೋಟೆಲ್‌ನಲ್ಲಿ ಕೆಲಸ ಮಾಡುವ ಮಾಣಿಯ ಜೊತೆ ಪತ್ರ ಕಳುಹಿಸಿದ್ದು ಅವಳೆ. ಪ್ರತಿಹಬ್ಬದ ಊಟ ಇವನಿಗಾಗಿ ಗಡಬಡಿಸಿ ಮನೆಯಿಂದ ತರುತ್ತಿದ್ದದ್ದು, ಇವನ ಹುಟ್ಟುಹಬ್ಬಕ್ಕೆ ಇವನ ಜೊತೆ ತಾನು ಹೊಸಬಟ್ಟೆ ಮತ್ತು ಕಲಾಕನ್ ತರುತ್ತಿದ್ದದ್ದು... ಸಂಡೇ ರಜೆ ಇದ್ದರೂ ಇವನ ಭೇಟಿ ಮಾಡಲು ಯೂನಿವರ್ಸಿಟಿಗೆ ಬರುತ್ತಿದ್ದದ್ದು... ನೀನು ಮದುವೆಯಾಗದಿದ್ದರೆ ಸಾಯುತ್ತೇನೆ ಎಂದು ಸಾವಿರ ಸಲ ಹೇಳಿದ್ದು ಅಥವಾ ಜೀವನ ಪರ್ಯಂತ ಮದುವೆ ಆಗದೆ ಹಾಗೆಯೇ ಇರುತ್ತೇನೆ ಎಂದು ಪ್ರಮಾಣ ಮಾಡಿದ್ದು... ಯುನಿವರ್ಸಿಟಿಯ ಕ್ಲರ್ಕ್, ನಿನಗೊಂದು ವರ ನೋಡಿನಮ್ಮ ಎಂದಾಗ, 'ಇವನ ಜೊತೆ ನನ್ನ ಎಂಗೇಜ್‌ಮೆಂಟ್ ಆಗಿದೆ' ಎಂದು ಇವನನ್ನು ತೋರಿಸಿದ್ದು; ಅವರಮ್ಮನಿಗೆ ಆರಾಮವಿಲ್ಲದಾಗ ತಾನು ಆಸ್ಪತ್ರೆಯಲ್ಲಿದ್ದು ತಾಯಿಯಂತೆ ಜೋಪಾನ ಮಾಡಿದ್ದು, ಅವರಮ್ಮ ನನ್ನ ಮಗನನ್ನು ಕಳೆದುಕೊಂಡರೂ ನಾನು ನಿನ್ನಲ್ಲಿ ಮಗನನ್ನು ನೋಡಿದೆ ಎಂದು ಶ್ಲಾಘಿಸಿದ್ದು ನೆನಪಿಗೆ ಬಂತು. ಪ್ರತಿದಿನ ಕ್ಯಾಂಪಸ್ಸಿನಲ್ಲಿ ಕೂಡುತ್ತಿದ್ದ ಮರದ ಕೆಳಹಾಸು ಲೈಬ್ರರಿ ಬೆಂಚುಗಳು ಇಬ್ಬರ ಕಥೆಗಳನ್ನು ಚಾಚು ತಪ್ಪದೆ ಒಪ್ಪಿಸುತ್ತಿದ್ದವು.

ಒಂದು ದಿನ ಅವಸರದಲ್ಲಿ ಕ್ಯಾಂಪಸ್ಸಿಗೆ ಬಂದಳು. 'ನನ್ನ ಮದುವೆ ನಿಗದಿ ಆಗಿದೆ. ಎಪ್ರಿಲ್ 21ನೇ ದಿನಾಂಕ. ಈ ದಿನ ವರನೊಬ್ಬ ನೋಡಿಕೊಂಡು ಹೋಗಿದ್ದಾನೆ. ಅವರಿಗೆ ಅರ್ಜೆಂಟಾಗಿ ಮದುವೆಯಾಗಬೇಕಂತೆ, ನನಗೆ ನಿನ್ನ ಬಿಟ್ಟು ಬದುಕಲು ಸಾಧ್ಯವಿಲ್ಲ. ಎಲ್ಲಿಯಾದರೂ ಓಡಿಹೋಗೋಣವೇ' ಎಂದು ಅಂದಿದ್ದಳು. ಅಂದು ಮೋಡ ಬಿಳಚಿಕೊಂಡಿತ್ತು. ತುಫಾನಿನ ವಿಚಿತ್ರ ಗಾಳಿ ಎಲ್ಲಾ ಕಡೆ ಬೀಸುತ್ತಿತ್ತು. ಇವನಿಗೂ ದಿಗಿಲಾಯಿತು. ನೀಲಗಿರಿಯ ಮರದ ಕಾಂಡಕ್ಕೆ ಆನಿಕೊಂಡು ನಿಂತು ಹೇಳಿದ, ನನ್ನ ಮನಸ್ಸು ಬಸವಣ್ಣನದು, ಹೃದಯ ಬುದ್ಧನದು. ನಿನ್ನ ಓಡಿಸಿಕೊಂಡು ಹೋಗುವುದು ಹೇಡಿತನ; ನಿನ್ನ ಮನೆಯವರನ್ನು ಒಪ್ಪಿಸುತ್ತೇನೆ. ದಯವಿಟ್ಟು ನೀನು ನಿರ್ದಾಕ್ಷಿಣ್ಯವಾಗಿ ಈ ಮದುವೆಯನ್ನು ತಿರಸ್ಕರಿಸು. ಇನ್ನೂ ಆರು ತಿಂಗಳಲ್ಲಿ ನಾವು ಮದುವೆ ಮಾಡಿಕೊಳ್ಳೋಣ ಎಂದಾಗ, 'ಆಯ್ತು 21 ನೇ ದಿನಾಂಕ ನಾನು ಪೂರ್ಣ ನಿನ್ನ ಜೊತೆ ಇರುವೆ' ಎಂದು ಹೋದಳು. 21ನೆ ದಿನಾಂಕ ಖಂಡೋಬನ ಹೋಟೆಲ್ಲಿನಲ್ಲಿ ಇವನು ರಾತ್ರಿಯವರೆಗೂ ಅವಳನ್ನು ಕಾಯುತ್ತ ಕುಳಿತ. ಅವಳು ಆ ಉದ್ಯಮಿಯನ್ನು ಅಂದೇ ಮದುವೆಯಾಗಿದ್ದಳು.

ಆಕೆಯ ಭೂತದ ಮಾತುಗಳು ಇವನ ಹೃದಯವನ್ನು ಇರಿಯುತ್ತಿದ್ದವು. ಎಲ್ಲಾ ವಿದ್ಯಾರ್ಥಿಗಳು ರಜೆಗೆ ಹೋದರೂ ಆ 200 ಕೋಣೆಗಳ ಹಾಸ್ಟೆಲಿನಲ್ಲಿ ಒಬ್ಬನೆ ಅವಳ ನೆನಪುಗಳನ್ನು ಧೇನಿಸುತ್ತ ಕಾಲ ಕಳೆದ. ಊಟವಿಲ್ಲ, ನೀರಿಲ್ಲ; ಮಧ್ಯರಾತ್ರಿ ಒಬ್ಬನೆ ಆ ಸಾವಿರ ಎಕರೆಯ ಕ್ಯಾಂಪಸ್‌ನಲ್ಲಿ ನಿಶಾಚರನಂತೆ ಅಲೆದ. ಅವಳು ಬಿಟ್ಟುಹೋದ ಗುರುತುಗಳು ಆ ಕ್ಯಾಂಪಸ್ಸಿನ